ರಾಜ್ಯದಲ್ಲಿ ನೇಕಾರರು ಅನುಭವಿಸುತ್ತಿರುವ ಕಷ್ಟ

2097 (2288) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೇಕಾರರು ನಷ್ಟ ಅನುಭವಿಸಿ ಜೀವನ ನಿರ್ವಹಣೆಗೆ ತುಂಬಾ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಷ್ಟು ಜನ ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ;

ಇ) ನೇಕಾರರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಮೃತ ನೇಕಾರರ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಹೌದು. ಕಳೆದ ಒಂದು ವರ್ಷದಲ್ಲಿ ಕಚ್ಚಾ ಮಾಲಿನ ಬೆಲೆ ಶೇ. 10 ರಿಂದ 20 ರಷ್ಟು ಜಾಸ್ತಿಯಾಗಿದ್ದು ಮತ್ತು 2 ವರ್ಷದಿಂದ ಬರಗಾಲ ಇರುವುದರಿಂದ ನೇಕಾರರು ತಯಾರಿಸಿದ ಪಕ್ಕಾ ಮಾಲು, ಮಾರಾಟವಾಗದೆ ದಾಸ್ತಾನು ಉಳಿದಿದ್ದು, ನೇಕಾರರಿಗೆ ತೊಂದರೆ ಆಗಿದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಒಟ್ಟು 07 ನೇಕಾರರು ಆತ್ಮಹತ್ಯೆ ಪ್ರಕರಣಗಳಿವೆ.

2001-02	-	5 ಜನ
2002-03	-	2 ಜನ

ಇ) ರಾಜ್ಯದ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡ್‌ಲೂಂ ಮತ್ತು ಕೈಮಗ್ಗ ನೇಕಾರರ ಸಹಕಾರ ಸಂಘಗಳ ಉಳಿಕೆ ದಾಸ್ತಾನು ಮಾರಾಟ ಮಾಡಲು ಹಾಗೂ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೆಳಗೆ ನಮೂದಿಸಿದಂತೆ ಕ್ರಮ ಜರುಗಿಸಲಾಗಿದೆ.

1. ಮಾರಾಟ ವರ್ಧನೆಗಾಗಿ ಕ್ರಮ ತೆಗೆದುಕೊಳ್ಳಲಾಗಿದ್ದು ಮಾರಾಟಕ್ಕೆ ಶೇ. 10ರ ವಿಶೇಷ ರಿಯಾಯ್ತಿ ಮಂಜೂರು ಮಾಡಲು ಆದೇಶ ನೀಡಲಾಗಿದೆ.
2. ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಸರ್ವಾಂಗೀಣ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ದೀನ ದಯಾಳ ಹತಖರ್ಗಾ ಯೋಜನೆಯಡಿ ಸಹಕಾರಿ ಸಂಘಗಳಿಗೆ ಹಣಕಾಸಿನ ಸೌಲಭ್ಯ ನೀಡಲಾಗಿದೆ.
3. ವಸತಿ-ವ-ಕಾರ್ಯಾಗಾರ, ನೇಕಾರರ ಆರೋಗ್ಯ ಬುತ್ತಿ, ಕಲ್ಯಾಣ ಕಾರ್ಯಕ್ರಮ, ಮಿತವ್ಯಯ ನಿಧಿ ಯೋಜನೆ, ಗುಂಪು ವಿಮಾ ಉಳಿತಾಯ ಯೋಜನೆ, ಸೀರೆ, ಧೋತಿ (ಎಸ್.ಎಸ್.ಡಿಎಸ್) ವಿದ್ಯಾ ವಿಕಾಸ ಯೋಜನೆ ಹಾಗೂ ಜಿಲ್ಲಾ ವಲಯ ಯೋಜನೆಗಳ ಮುಖಾಂತರ ಸಹಾಯ ಸವಲತ್ತುಗಳನ್ನು ನೀಡಲಾಗುತ್ತಿದೆ.

ಈ) ಮೃತ ನೇಕಾರ ಕುಟುಂಬಗಳಿಗೆ ಈ ಇಲಾಖೆಯಿಂದ ಯಾವುದೇ ಪರಿಹಾರ ನೀಡಲಾಗಿರುವುದಿಲ್ಲ.

ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆಯ ಹುದ್ದೆಗಳು

2098 (2289) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?